ದಿನಾಂಕಃ 23.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ಎಮ್.ಆರ್. ಬಿ ವಕೀಲರಿಂದಃ**

ಗುರುಲಿಂಗಪ್ಪ ತೀರಿಕೊಂಡ ನಂತರ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ವಾರಸಾ ನಾತೆಯಿಂದ ಹಾಗೂ ಕೋರ್ಟ ಡಿಕ್ರಿ ಪ್ರಕಾರ ಪ್ರತಿವಾದಿಯರ ಹೆಸರು ದಾಖಲಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನನ್ನ ಗಂಡನ ಖಾಸಾ ಸಹೋದರಿ ಇರುತ್ತಾಳೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. 1ನೇ ಪ್ರತಿವಾದಿ ನನಗೆ ಸಂಬಂಧದಲ್ಲಿ ನಾದಿನಿಯಾಗಬೇಕು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ 1 ನೇಪ್ರತಿವಾದಿ ನನಗೆ ಚಿಕ್ಕಮ್ಮಳಾಗಬೇಕು ಎಂದು ಹೇಳಿ ಬರೆಸಿರುತ್ತೇನೆಂದರೆ ನಿಜ.

ಮೈತ ಗುರುಲಿಂಗಪ್ಪನು 2 ನೇ ವಾದಿ ತಾರಾಮತಿ ಹಾಗೂ ತನ್ನ ತಾಯಿ ಕಾಶವ್ವಾ ಇವರುಗಳ ವಿರುದ್ಧ ದಾವಾಸ್ತಿಗಳಿಗೆ ಸಂಬಂಧಪಟ್ಟಂತೆ ಓ. ಎಸ್. ನಂಬರ 365/1990 ನೇದ್ದನ್ನು ದಾಖಲಿಸಿದ್ದಳು ಎಂದರೆ ನಿಜ. ಸದರಿ ದಾವೆಯಲ್ಲಿ ಮೈತ ಗುರುಲಿಂಗಪ್ಪನು ತನ್ನ ತಾಯಿ ಕಾಶವ್ವ ಇವಳು 2 ನೇ ವಾದಿಗೆ ದಾವಾಸ್ತಿಯ ಕುರಿತು ಬರೆದುಕೊಟ್ಟಿರುತ್ತಾಳೆಂದು ಹೇಳಲಾದ ದಾನಪತ್ರ ರದ್ಧತಿ ಕೋರಿ ಸದರಿ ದಾವೆಯನ್ನು ಸಲ್ಲಿಸಿದ್ದನು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಕಾಶವ್ವಳು ಹಾಜರಾಗಿ ತಾನು 2 ನೇ ವಾದಿಯ ಪರವಾಗಿ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾನಪತ್ರ ಕೊಟ್ಟಿಲ್ಲ ಎಂದು ತಕರಾರು ಸಲ್ಲಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಕಾಶವ್ವಳು ದಾವಾಸ್ತಿಗಳು ತನಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ, ಸದರಿ ಎಲ್ಲಾ ದಾವಾಸ್ತಿಗಳು ಮೈತ ಗುರುಲಿಂಗಪ್ಪನ ಸ್ವಯಾರ್ಜಿತ

ಆಸ್ತಿಗಳು ಇರುತ್ತವೆ ಎಂದು ತನ್ನ ತಕರಾರಿನಲ್ಲಿ ಬರೆಸಿಕೊಂಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಮೇಲೆ ಹೇಳಿದ ದಾವೆಯಲ್ಲಿ ಮೃತ ಗುರುಲಿಂಗಪ್ಪನು 2ನೇ ವಾದಿಯು ತನ್ನ ಹೆಂಡತಿ ಇರುವುದಿಲ್ಲ ಎಂದು ಹೇಳಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ದಾವೆಯಲ್ಲಿ ಮೃತ ಗುರುಲಿಂಗಪ್ಪನು 2 ನೇ ವಾದಿ ತನ್ನ ಜೊತೆ ಅನೈತಿಕ ಸಂಬಂಧ ಇರುವುದರ ಗೈರು ಪಾಯದೇ ಪಡೆದುಕೊಂಡು ದಾನಪತ್ರವನ್ನು ಸೃಷ್ಟಿಸಿಕೊಂಡಿರುತ್ತಾಳೆಂದು ಹೇಳಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಮೃತ ಗುರುಲಿಂಗಪ್ಪನು ಸದರಿ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ 2 ನೇ ವಾದಿಯು ಮೃತ ಗುರುಲಿಂಗಪ್ಪನ ಕಾನೂನು ಬದ್ಧ ಹೆಂಡತಿ ಯಾಗಿರುವುದಿಲ್ಲ ಹಾಗೂ ಅವಳು ಕಾಶವ್ವಳ ಕಡೆಯಿಂದ ಖೊಟ್ಟಿಯಾಗಿ ದಾನಪತ್ರವನ್ನು ಸೃಷ್ಟಿಸಿಕೊಂಡಿರುತ್ತಾಳೆಂದು ನ್ಯಾಯಾಲಯವು ತೀರ್ಪು ನೀಡಿರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪನ್ನು ರದ್ದುಪಡಿಸುವಂತೆ ಕೋರಿ 2ನೇ ವಾದಿಯು ಅದೇ ನ್ಯಾಯಾಲಯದಲ್ಲಿ ಸಿವಿಲ್ ಮಿಸ್ ನಂಬರ 12/2000 ನೇದ್ದರಲ್ಲಿ ಅರ್ಜಿಯನ್ನು ಸಲ್ಲಿಸಿದ್ದಳು ಎಂದರೆ ನಿಜ. ಸದರಿ ಪ್ರಕರಣದಲ್ಲಿ 1 ಮತ್ತು 2 ನೇ ವಾದಿ ಇಬ್ಬರೂ ಸಾಕ್ಷ್ಯ ನುಡಿದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ವಾದಿಯರು ತಾವು ಮೃತ ಗುರುಲಿಂಗಪ್ಪನ ಕಾನೂನುಬದ್ಧ ಹೆಂಡತಿ ಮತ್ತು ಮಗ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳಿ ನ್ಯಾಯಾಲಯವು ಸದರಿ ಪ್ರಕರಣವನ್ನು ವಜಾ ಗೊಳಿಸಿರುತ್ತೆಂದರೆ ನನಗೆ ಗೊತ್ತಿಲ್ಲ. ಸದರಿ ತೀಪಿನ ವಿರುದ್ಧ ವಾದಿಯರು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ

ಪ್ರಕರಣಗಳ ಬಗ್ಗೆ ವಾದಿಯರು ನನಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ. ಸದರಿ ಮಾಹಿತಿಯನ್ನು ಯಾವಾಗ ಹೇಳಿರುತ್ತಾರೆ? ಎಂದರೆ ಸಾಕ್ಷಿಯು ನನ್ನ ಮಗಳನ್ನು 1 ನೇ ವಾದಿಗೆ ಮದುವೆ ಮಾಡಿ ಕೊಟ್ಟ ನಂತರ ಅಂದರೆ ಸನ್ 2002 ರಲ್ಲಿ ಹೇಳಿರುತ್ತಾರೆ. ಸದರಿ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ.

2 ನೇ ವಾದಿ ಹಾಗೂ ಮೃತ ಗುರುಲಿಂಗಪ್ಪನ ಮದುವೆಯಾದ ವಿಧಿ-ವಿಧಾನಗಳ ಕುರಿತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ಸದರೀಯವರ ಮದುವೆಯಲ್ಲಿ ಯಾರು ಯಾವ ಕಾರ್ಯವನ್ನು ನಿರ್ವಹಿಸಿರುತ್ತಾರೆಂದರೆ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಗೋವಾದಲ್ಲಿ ಸಂಪ್ರದಾಯದಂತೆ ಮದುವೆಯಾಗಿರುತ್ತದೆಂದು ನುಡಿಯುತ್ತಾರೆ. ನನ್ನ ಮಗಳನ್ನು 1 ನೇ ವಾದಿಗೆ ಮದುವೆ ಮಾಡಿಕೊಟ್ಟ ನಂತರ 2 ನೇ ವಾದಿ ಹಾಗೂ ಮೃತ ಗುರುಲಿಂಗಪ್ಪನ ಮದುವೆ ಆದ ಬಗ್ಗೆ ಕೇಳಿರುತ್ತೇನೆ. ವಾದಿಯರು ಹಾಗೂ ಮೃತ ಗುರುಲಿಂಗಪ್ಪ ಮಲ್ಲಾಪೂರ ಪಿ. ಜಿ ಗ್ರಾಮದಲ್ಲಿ ಒಂದೇ ಮನೆಯಲ್ಲಿ ವಾಸವಾಗಿ ತಮ್ಮ ವೈವಾಹಿಕ ಜೀವನವನ್ನು ನಡೆಸಿದರ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ನಿಜ.

ಮೃತ ಗುರುಲಿಂಗಪ್ಪ ಹಾಗೂ ನನ್ನ ಗಂಡ ಇಬ್ಬರೂ ಖಾಸಾ ಸಹೋದರರ ಮಕ್ಕಳು ಎಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. 1 ನೇ ವಾದಿಯು ಮೃತ ಗುರುಲಿಂಗಪ್ಪನನ್ನು ಮದುವೆಯಾದಾಗಿನಿಂದಲೂ ಹಾಗೂ ಇವತ್ತಿನವರೆಗೂ ಸಹ ದಾವಾಸ್ತಿಗಳಲ್ಲಿ ವಾಸವಾಗಿದ್ದಾಳೆಂದರೆ ಸಾಕ್ಷಿಯು ಎರಡು ತಿಂಗಳ ಗರ್ಭಿಣಿ ಇದ್ದಾಗ

ಮಮದಾಪೂರ ಗ್ರಾಮಕ್ಕೆ ಬಂದು ವಾಸವಾಗಿದ್ದು, ಮೈತ ಗುರುಲಿಂಗಪ್ಪನು ತೀರಿಕೊಳ್ಳುವದಕ್ಕಿಂತ 01 ತಿಂಗಳ ಮುಂಚಿತವಾಗಿ ಮಲ್ಲಾಪೂರ ಪಿ. ಜಿ ಗ್ರಾಮಕ್ಕೆ ಬಂದಿರುತ್ತಾಳೆಂದು ನುಡಿಯುತ್ತಾರೆ. ಮೈತ ಗುರುಲಿಂಗಪ್ಪನು ತೀರಿಕೊಂಡು ಸುಮಾರು 15-20 ವರ್ಷಗಳಾಗಿರಬಹುದು. ನಾನು 1 ನೇ ವಾದಿಯ ಖಾಸ ಸೋದರತ್ತೆ ಇರುತ್ತೇನೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. 1 ನೇ ವಾದಿ ಮಲ್ಲಾಪೂರ ಪಿ. ಜಿ ಗ್ರಾಮದಲ್ಲಿ ವಾಸವಾಗಿದ್ದ ಅಲ್ಲಿಯೇ ತನ್ನ ಶಿಕ್ಷಣವನ್ನು ಪಡೆದುಕೊಂಡಿದ್ದು, ನಂತರ ಧಾರವಾಡದಲ್ಲಿ ವಾಸವಾಗಿದ್ದು, ಛತ್ತೀಸಗಡ ಹಾಗೂ ದುಬೈದಲ್ಲಿ ನೌಕರಿ ಮಾಡಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯರು ಧಾರವಾಡದಲ್ಲಿ ವಾಸವಾಗಿ ಈಗ ಸುಮಾರು 30 ವರ್ಷಗಳಾಗಿರಬಹುದು. ಧಾರವಾಡದಲ್ಲಿರುವ ಸುಭಾಸ ಮಾರ್ಕೆಟ್ ನಲ್ಲಿ 2ನೇ ವಾದಿ ತರಕಾರಿ ವ್ಯಾಪಾರ ಮಾಡುತ್ತಿದ್ದಳು ಎಂದರೆ ನಿಜ. ಮೇಲೆ ಹೇಳಿದ ದಾವೆಯ ನೋಟಿಸು 2 ನೇ ವಾದಿಗೆ ಧಾರವಾಡದ ವಿಳಾಸಕ್ಕೆ ಜಾರಿಯಾಗಿರುತ್ತದೆಂದರೆ ನಿಜ. ನನ್ನ ಮಗಳು ಹಾಗೂ 1ನೇ ವಾದಿಯ ಮದುವೆ ಆಮಂತ್ರಣ ಪತ್ರಿಕೆಯಲ್ಲಿ ವಾದಿಯರ ವಿಳಾಸವನ್ನು ಧಾರವಾಡ ಎಂದು ತೋರಿಸಿದ್ದೇವು ಎಂದರೆ ನಿಜ. ನಾನು ದಾವಾಸ್ತಿಗಳ ಉತಾರಗಳನ್ನು ನೋಡಿರುತ್ತೇನೆ. ಯಾವ ವರ್ಷದ ಉತಾರೆಗಳನ್ನು ನೋಡಿರುತ್ತೀರಿ? ಎಂದರೆ ಸಾಕ್ಷಿಯು ನನ್ನ ಮಗಳ ಮದುವೆಯಾದ 01 ವರ್ಷದ ನಂತರ ನೋಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಪ್ರತಿವಾದಿಯರು ಹಾಗೂ ಮೈತ ಗುರುಲಿಂಗಪ್ಪನ ಇನ್ನೊಬ್ಬ ಮಗ ನಾಗಪ್ಪನ ಹೆಸರುಗಳು ಉತಾರೆಗಳಲ್ಲಿ ದಾಖಲು ಇದ್ದವು ಎಂದರೆ ಸಾಕ್ಷಿಯು ಅವರ ಜೊತೆ ವಾದಿಯರ ಹೆಸರುಗಳು ಸಹ ಇದ್ದವು ಎಂದು ನುಡಿಯುತ್ತಾರೆ. ವಾದಿಯರಿಗೆ ದಾವಾಸ್ತಿಗಳು ಹೇಗೆ ಬಂದಿರುತ್ತವೆ

ಎಂದು ನನ್ನ ಮಗಳನ್ನು ಕೊಡುವ ಕಾಲಕ್ಕೆ ವಿಚಾರಣೆ ಮಾಡಿರುವುದಿಲ್ಲ ಆದರೆ ದಾವಾಸ್ತಿಗಳು ಅವರ ಹೆಸರಿಗೆ ಇರುತ್ತವೆ ಎಂಬುದು ಗೊತ್ತಾಗಿ ನನ್ನ ಮಗಳನ್ನು ಕೊಟ್ಟಿರುತ್ತೇನೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವಂತೆ ದಾವಾಸ್ತಿಗಳು ವಾದಿಯರ ಹಾಗೂ ಪ್ರತಿವಾದಿಯರ ಸಮಾಯಿಕ ಕಬ್ಜೆಯಲ್ಲಿರುತ್ತವೆ ಎಂದು ಹೇಳಿದ್ದು, ಯಾರು ವಾದಿಯರ ಇರುತ್ತಾರೆಂದರೆ ಸಾಕ್ಷಿಯು ನಾವೇ ಇರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ತಿಗಳು ವಾದಿಯರ ಹಾಗೂ ಪ್ರತಿವಾದಿಯರ ಸಮಾಯಿಕ ಕಬ್ಜೆಯಲ್ಲಿರುತ್ತವೆ ಎಂದು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ ಆದರೆ ಅವರೇ ಕಬ್ಜೆಯಲ್ಲಿರುತ್ತಾರೆ. 2 ನೇ ವಾದಿ ಮೃತ ಗುರುಲಿಂಗಪ್ಪ ಹೆಂಡತಿ ಆಗಿರುವುದಿಲ್ಲ ಹಾಗೂ 1 ನೇ ವಾದಿ ಆತನ ಮಗ ಇರುವುದಿಲ್ಲ ಎಂದರೆ ಸರಿಯಲ್ಲ.

1 ನೇ ವಾದಿ ನನ್ನ ಮಗಳ ಗಂಡನಾಗಿರುವ ಕಾರಣ ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಆತನ ಮಾತನ್ನು ಕೇಳಿಕೊಂಡು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈಗ 4-5 ವರ್ಷಗಳ ಹಿಂದೆ ವಾದಿಯರು ದಾವಾಸ್ತಿಗಳಲ್ಲಿ ಪಾಲು ಕೊಡುವಂತೆ ಕೇಳಿರುತ್ತಾರೆ. ಆ ಸಮಯದಲ್ಲಿ ದಾವಾಸ್ತಿಗಳು ಯಾರ ಹೆಸರಿನಲ್ಲಿದ್ದವು ಎಂದು ನಾನು ನೋಡಿರುವುದಿಲ್ಲ. ದಾವಾಸ್ತಿಗಳ ಕರ ಪಾವತಿಯನ್ನು ಪ್ರತಿವಾದಿಯರೇ ತುಂಬುತ್ತಾ ಬಂದಿರುತ್ತಾರೆಂದರೆ ಸಾಕ್ಷಿಯು ಅನ್ಯಾಯವಾಗಿ ಬರೆಸಿಕೊಂಡಿದ್ದರಿಂದ ಅವರೇ ತುಂಬಬೇಕಾಗುತ್ತದೆಂದು ನುಡಿಯುತ್ತಾರೆ. ಪ್ರತಿವಾದಿಯರು ನ್ಯಾಯಾಲಯದಿಂದ ಅನ್ಯಾಯವಾಗಿ ದಾವಾಸ್ತಿಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡಿರುತ್ತಾರೆ. ನ್ಯಾಯಾಲಯದಿಂದ ಅನ್ಯಾಯವಾಗಿ ಪ್ರತಿವಾದಿಯರು ಆಸ್ತಿಗಳನ್ನು ಬರೆಸಿಕೊಂಡಿರುತ್ತಾರೆಂದು ವಾದಿಯರು ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ

ಎಂದರೆ ಸಾಕ್ಷಿಯು 1 ನೇ ವಾದಿಯ ಆಫ್ರಿಕದಲ್ಲಿ ವಾಸವಾಗಿದ್ದು, 2 ನೇ ವಾದಿ ಧಾರವಾಡಾದಲ್ಲಿ ವಾಸವಾಗಿದ್ದರಿಂದ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 1 ನೇ ವಾದಿ ಆಫ್ರಿಕದಿಂದ ಮರಳಿ ಬಂದ ನಂತರ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆಂದು ನುಡಿಯುತ್ತಾರೆ. 1 ನೇ ವಾದಿಯು ಸನ್ 20.09.1999 ರಂದು ತಾನು ಹಾಗೂ 2 ನೇ ವಾದಿ ಮೈತ ಗುರುಲಿಂಗಪ್ಪನ ವಾರಸುದಾರರು ಇರುತ್ತೇವೆ ಎಂದು ತಹಶೀಲ್ದಾರ ಕಚೇರಿ, ಗೋಕಾಕರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸದರಿ ಅರ್ಜಿಯನ್ನು ತಹಶೀಲ್ದಾರವರು ತಿರಸ್ಕ್ಕರಿಸಿ ಮೈತ ಗುರುಲಿಂಗಪ್ಪನ ವಾರಸುದಾರರು ಪ್ರತಿವಾದಿಯರು ಹಾಗೂ ನಾಗಪ್ಪ ಇರುತ್ತಾರೆಂದು ಪ್ರಮಾಣಪತ್ರವನ್ನು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರೀ ಆದೇಶದ ವಿರುದ್ಧ ವಾದಿಯರು ಎಸಿ, ನ್ಯಾಯಾಲಯ ಬೈಲಹೊಂಗಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ಎಸಿ ಬೈಲಹೊಂಗಲರವರು ಈಗಾಗಲೇ ಮೈತ ಗುರುಲಿಂಗಪ್ಪನ ವಾರಸುದಾರರು ಪ್ರತಿವಾದಿಯರು ಹಾಗೂ ನಾಗಪ್ಪ ಇರುತ್ತಾರೆಂದು ಪ್ರಮಾಣಪತ್ರ ನೀಡಿರುವುದು ಸರಿ ಇದ್ದು, ಸನ್ 2000ರಲ್ಲಿ ಆ ಬಗ್ಗೆ ಪ್ರಶ್ನಿಸಿಸುವುದಾದರೆ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಳ್ಳಿ ಎಂದು ಆದೇಶವನ್ನು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಸನ್ 2000 ರಲ್ಲಿ ಆದೇಶವಾದ 19 ವರ್ಷಗಳ ನಂತರ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸದರೀ ಸನ್ 2000 ನೇದ್ದರ ಪ್ರಕರಣದಲ್ಲಿ 1 ನೇ ವಾದಿ ಸಾಕ್ಷ್ಯ ನುಡಿದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯರು ಮೈತ ಗುರುಲಿಂಗಪ್ಪನ ಮಗ ಮತ್ತು ಹೆಂಡತಿ ಇರದೇ ಇದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಗುರುಲಿಂಗಪ್ಪನಿಗೆ ಸಂಬಂಧ ಇರದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ